# ಭಾರತದ ಟಾಯ್ಲೆಟ್ ಮ್ಯಾನ್



■ ಪ್ರವೀಣ ಕುಲಕರ್ಣಿ

‘ಭಾರತದ ಟಾಯ್ಲೆಟ್ ಮ್ಯಾನ್’, ‘ಮಿಸ್ಟರ್ ಸ್ಯಾನಿಟೇಷನ್’ ಎಂಬ ಖ್ಯಾತಿ ಗಳಿಸಿದ್ದ ಬಿಂದೇಶ್ವರ ಪಾಠಕ್, ಭಾರತೀಯರಿಗೆ ಸ್ವಚ್ಛ ಮತ್ತು ಸುರಕ್ಷಿತ ಶೌಚಾಲಯಗಳನ್ನು ಪರಿಚಯಿಸಿದ ಸಮಾಜ ಪರಿವರ್ತನೆಯ ಹರಿಕಾರ. ಮಿತವ್ಯಯದ, ಎರಡು ಗುಂಡಿಗಳ ಶೌಚಾಲಯದ ವಿನ್ಯಾಸವನ್ನು ರೂಪಿಸಿದವರು ಈ ಪಾಠಕ್. ಅಂತಹ ಸಾಧಕ ಕಳೆದ ವಾರ ಸದ್ದಿಲ್ಲದೆ ಚರಿತ್ರೆಯ ಪುಟಕ್ಕೆ ಜಾರಿದರು. ದೇಶದ ತುಂಬಾ ಲಕ್ಷಾಂತರ ಮನೆಗಳಲ್ಲಿ ಈಗಲೂ ಬಳಕೆಯಲ್ಲಿರುವುದು ಅವರು ವಿನ್ಯಾಸ ಮಾಡಿದಂತಹ ಶೌಚಾಲಯಗಳೇ. ಈ ನಮ್ಮ ‘ಮಿಸ್ಟರ್ ಸ್ಯಾನಿಟೇಷನ್’ 1970ರ ದಶಕದಲ್ಲಿ ಶೌಚಾಲಯಗಳ ನಿರ್ಮಾಣದ ಆಂದೋಲನವನ್ನೇ ಮಾಡಿದವರು. ಇದರ ಪರಿಣಾಮವೆಂಬಂತೆ ಸ್ವಚ್ಛತೆಯ ಆಂದೋಲನವೂ ಸದ್ದಿಲ್ಲದೆ ನಡೆದಿತ್ತು.

ಸಾರ್ವಜನಿಕ ಶೌಚಾಲಯಗಳ ಪರಿಕಲ್ಪನೆ ಅಷ್ಟೊಂದು ವಿಕಸನವಾಗದಿದ್ದ ಕಾಲದಲ್ಲಿ, ಗಲೀಜು ಗುಂಡಿಗಳೇ ಎಲ್ಲೆಡೆ ತುಂಬಿದ್ದ ಆ ಸಂದರ್ಭದಲ್ಲಿ ಹಣ ಪಾವತಿಸಿ ಬಳಕೆ ಮಾಡುವ ಶೌಚಾಲಯಗಳ ಪರಿಕಲ್ಪನೆಗೆ ಜೀವ ತುಂಬಿದವರು ಪಾಠಕ್. ಅವರ ‘ಸುಲಭ್ ಫೌಂಡೇಷನ್’ನಿಂದ ದೇಶದ ಬಹುತೇಕ ನಗರಗಳಲ್ಲಿ ಇಂತಹ ಶೌಚಾಲಯಗಳು ಸ್ಥಾಪನೆಯಾದವು. ಹಣ ಪಾವತಿಸಿ ಬಳಕೆ ಮಾಡುವ ಈ ಶೌಚಾಲಯಗಳು ಸ್ವಚ್ಛವಾಗಿದ್ದವು ಮತ್ತು ಬಳಕೆಗೆ ಸುರಕ್ಷಿತವಾಗಿದ್ದವು. ಗಲೀಜು ಗುಂಡಿಗಳನ್ನೇ ನೋಡಿದ ಜನ ಹುಬ್ಬೇರಿಸುವಂತೆ ಇಲ್ಲಿನ ಪರಿಸರ ಸ್ವಚ್ಛವಾಗಿತ್ತು. ‘ಷೀ’ಗೆ (ಮೂತ್ರ ವಿಸರ್ಜನೆ) ಒಂದು ರೂಪಾಯಿ ಮತ್ತು ‘ಪೂ’ಗೆ (ಮಲ ವಿಸರ್ಜನೆ) ಎರಡು ರೂಪಾಯಿ ಎನ್ನುವುದು ಸ್ವಚ್ಛ ಶೌಚಾಲಯದ ಪರಿಕಲ್ಪನೆಯಾಗಿತ್ತು. ಅಲ್ಲಿಯವರೆಗೆ ಸಾರ್ವಜನಿಕ ಶೌಚಾಲಯವೆಂದರೆ ಹೆಚ್ಚಿನ ಸಂಖ್ಯೆಯ ಭಾರತೀಯರ ಪಾಲಿಗೆ ಮರದ ಮರೆಗೆ ಹೋಗುವುದೇ ಆಗಿತ್ತು.

ಸುಲಭ್ ಶೌಚಾಲಯಗಳ ಮೂಲಕ ಪಾಠಕ್ ಒಂದೇ ಕಲ್ಲಿನಿಂದ ಹಲವು ಹಕ್ಕಿಗಳಿಗೆ ಹೊಡೆದರು. ಒಂದೆಡೆ ನೈರ್ಮಲ್ಯದ ಕೊರತೆಯನ್ನು ನೀಗಿಸಿ, ಸ್ವಚ್ಛ ಪರಿಸರಕ್ಕೆ ನಾಂದಿ ಹಾಡಿದರೆ, ಇನ್ನೊಂದೆಡೆ ಮಲ ಹೊರುವ ಪದ್ಧತಿಗೂ ತಿಲಾಂಜಲಿ ನೀಡುವಂತೆ ಮಾಡಿದರು. ದಲಿತರ ಪರವಾಗಿ ಅವರು ಮಾಡಿದ ಕೆಲಸ ಜಾಗತಿಕ ಮಟ್ಟದಲ್ಲಿ ವ್ಯಾಪಕವಾಗಿ ಪ್ರಶಂಸೆಗೆ ಪಾತ್ರವಾಗಿದೆ. ಅದು 1989ರ ಸಮಯ. ನೂರು ದಲಿತ ಬಾಕಲಿಯರೊಂದಿಗೆ ರಾಜಸ್ಥಾನದ ದೇವಸ್ಥಾನವೊಂದಕ್ಕೆ ಪ್ರವೇಶಿಸಿದ್ದ ಅವರು, ಸಾರ್ವಜನಿಕವಾಗಿ ಅವರೊಂದಿಗೆ ಅಲ್ಲಿಯೇ ಊಟ ಮಾಡಿದ್ದರು. ಅವರ ಈ ಕ್ರಾಂತಿಯ ನಡೆ ದೇಶದಾದ್ಯಂತ ಸದ್ದು ಮಾಡಿತ್ತು.

‘ಸಾರ್ವಜನಿಕ ನೈರ್ಮಲ್ಯ ಕಾಪಾಡುವುದು, ಅದಕ್ಕಾಗಿ ದುಡಿಯುವುದು ನನ್ನ ಜೀವನದ ಪರಮೋಚ್ಚ ಗುರಿ. ಈ ಕೆಲಸವನ್ನು ನಾನು ನನ್ನ ಮಗ ಮತ್ತು ಮಗಳಿಗಿಂತ ಹೆಚ್ಚಾಗಿ ಪ್ರೀತಿಸುತ್ತೇನೆ’ ಎಂದು ಅವರೊಮ್ಮೆ ಸಂದರ್ಶನದಲ್ಲಿ ಹೇಳಿದ್ದರು. ಮಹಾತ್ಮ ಗಾಂಧಿ ಅವರ ತತ್ವಗಳಿಂದ ಪ್ರಭಾವಿತರಾಗಿರುವ ಅವರು, ಸ್ವಚ್ಛ ಪರಿಸರ ನಿರ್ಮಾಣಕ್ಕಾಗಿಯೇ ಜನಿಸಿದಂತಿದ್ದರು.

ಹಾಗೆ ನೋಡಿದರೆ ಪಾಠಕ್, ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದವರು. ಅಸ್ಪೃಶ್ಯ ಆಚರಣೆಯನ್ನು ಬಲು ಹತ್ತಿರದಿಂದ ನೋಡಿದವರು. ದಲಿತ ಮಹಿಳೆಯೊಬ್ಬಳು ಅವರ ಮನೆಗೆ ತರಕಾರಿ ತಂದು ಕೊಡುತ್ತಿದ್ದಳು. ಪ್ರತಿಸಲ ಅವಳು ಬಂದು ಹೋದಾಗ ಅವರ ಅಜ್ಜಿ, ಅವಳು ಕುಳಿತ ಜಾಗದಲ್ಲಿ ನೀರು ಪ್ರೋಕ್ಷಣೆ ಮಾಡುತ್ತಿದ್ದಳು. ಏಕೆ ಎಂದು ವಿಚಾರಿಸಿದಾಗ ಆ ಜಾಗವನ್ನು ಪವಿತ್ರಗೊಳಿಸಬೇಕು ಎಂದು ಉತ್ತರಿಸುತ್ತಿದ್ದಳು. ಆ ಮಹಿಳೆಯನ್ನು ಮುಟ್ಟಿದರೆ ಏನು ಬದಲಾವಣೆ ಆಗುತ್ತದೆ ಎಂಬುದನ್ನು ನೋಡಿಯೇ ಬಿಡೋಣ ಎಂದು ಪಾಠಕ್ ಆಕೆಯನ್ನು ಮುಟ್ಟಿಬಿಟ್ಟರು. ಆ ಸುದ್ದಿ ಕ್ಷಿಪ್ರಗತಿಯಲ್ಲಿ ಹರಡಿ ಪುರೋಹಿತರು ಅಪವಿತ್ರಗೊಂಡ ಬಾಲಕ ಪಾಠಕ್‌ನನ್ನು ಮನೆಯಿಂದ ಹೊರಗಟ್ಟುವಂತೆ ಫರ್ಮಾನು ಹೊರಡಿಸಿದರು. ಅದಕ್ಕೆ ಪಾಠಕ್ ಅವರ ಅಮ್ಮ ವಿರೋಧ ವ್ಯಕ್ತಪಡಿಸಿದಾಗ, ಈ ಬಾಲಕನಿಗೆ ಗೋಮೂತ್ರ ಕುಡಿಸಿ, ಪವಿತ್ರಗೊಳಿಸಿದರು. ಆಗಲೇ ಪಾಠಕ್ ಅವರಿಗೆ ಗೊಡ್ಡು ಸಂಪ್ರದಾಯಗಳು ಹೇವರಿಕೆ ಹುಟ್ಟಿಸಿದವು. ಸಮಾಜಶಾಸ್ತ್ರೀಯವಾದ ಅವರ ದೃಷ್ಟಿಕೋನ ದೇಶದ ಪರಿಸರದ ಮತ್ತು ಜನರ ಮನಸಿನ ಕೊಳೆಯನ್ನು ತೊಳೆಯಲು ಹಾತೊರೆಯಿತು.

1968ರಲ್ಲಿ ಪಾಠಕ್ ಅವರ ವಿವಾಹವಾಯಿತು. ಅವರು ಮೂರು ತಿಂಗಳವರೆಗೆ ದಲಿತ ಕಾಲೊನಿಯಲ್ಲಿ ವಾಸವಾಗಿದ್ದು, ಸ್ವಚ್ಛ ಪರಿಸರ ನಿರ್ಮಾಣಕ್ಕೆ ನಾಂದಿ ಹಾಡಿದರು. ಪಾಠಕ್ ಅವರ ಅತ್ತೆ, ‘ಯಾಕಾಗಿ ನಾನು ಈ ಹುಡುಗನಿಗೆ ಮಗಳನ್ನು ಕೊಟ್ಟೆನೋ’ ಎಂದು ಮರುಗಿದರು. ಆದರೆ, ಪಾಠಕ್ ಅವರ ಚಿತ್ತ ಎತ್ತಲೂ ಕದಲಲಿಲ್ಲ. ಸುಲಭ ಶೌಚಾಲಯಕ್ಕೆ ಏನು ಮಾಡಬಹುದು ಎಂದು ಶೋಧಿಸತೊಡಗಿದರು. ಅದರ ಪರಿಣಾಮವೇ ಎರಡು ಗುಂಡಿಗಳ ಶೌಚಾಲಯ ಕ್ರಾಂತಿಗೆ ನಾಂದಿಯಾಯಿತು. 1969ರಲ್ಲಿ ಅವರು ಮೊದಲ ಶೌಚಾಲಯ ನಿರ್ಮಿಸಿದರು. ಅದರ ಯಶಸ್ಸನ್ನು ಕಂಡು ಸರ್ಕಾರ 200 ಶೌಚಾಲಯಗಳ ನಿರ್ಮಾಣಕ್ಕೆ ಬೇಡಿಕೆಯಿಟ್ಟಿತು. ಹಾಗೆ ಶುರುವಾದ ಕ್ರಾಂತಿ ಮುಂದೆ 15 ಲಕ್ಷ ಶೌಚಾಲಯಗಳ ನಿರ್ಮಾಣಕ್ಕೆ ಕಾರಣವಾಯಿತು. ಜಗತ್ತಿನ ಹಲವು ದೇಶಗಳು ಈ ವಿನ್ಯಾಸವನ್ನೇ ಅನುಸರಿದವು. ಬಸ್ ನಿಲ್ದಾಣ, ರೈಲು ನಿಲ್ದಾಣ, ಮಾರುಕಟ್ಟೆ ಪ್ರದೇಶ... ಹೀಗೆ ಜನ ನಿಬಿಡ ಪ್ರದೇಶಗಳನ್ನೇ ಹುಡುಕಿಕೊಂಡು ಹೋಗಿ ಅವರು ಶೌಚಾಲಯ ನಿರ್ಮಿಸಿದರು.

ಬಿಬಿಸಿಗೆ ಅವರೊಮ್ಮೆ ನೀಡಿದ ಸಂದರ್ಶನದಲ್ಲಿ ಹೇಳಿದ ಮಾತು ಅವರ ಮನೋಧರ್ಮವನ್ನು ಬಲು ಅರ್ಥವತ್ತಾಗಿ ಪ್ರತಿಬಿಂಬಿಸುತ್ತದೆ. ಅವರು ಹೇಳಿದ್ದರು: ‘ಸ್ವಚ್ಛತೆಯೇ ನನ್ನ ಧರ್ಮ. ನೀವು ಇನ್ನೊಬ್ಬ ವ್ಯಕ್ತಿಯ ಸಹಾಯಕ್ಕೆ ಹೋಗಿಲ್ಲವೆಂದರೆ ದೇವರಿಗೆ ನೀವು ಒಮ್ಮೆಯೂ ಪ್ರಾರ್ಥನೆ ಸಲ್ಲಿಸಿಲ್ಲ ಎಂದೇ ಅರ್ಥ.’ ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65